ದಿನಾಂಕಃ 07-01-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀ ಸವಾಲು ಶ್ರೀಯುತ ಎಸ್ ಸಿ ಜಿ ವಕೀಲರಿಂದಃ

ನಾನು ಸಾಕ್ಷ ಪ್ರಮಾಣ ಪತ್ರದಲ್ಲಿ ಪ್ರತಿವಾದಿ ನಂ.2 ಎ ದಿಂದ 2 ಸಿ, 3 ಮತ್ತು 4 ನೇ ಪ್ರತಿವಾದಿಗಳ ಪರವಾಗಿ ಮಾತ್ರ ನೀಡುತ್ತಿದ್ದೇನೆ. ದಾವಾ ಐಟಮ ನಂ.13 ಮತ್ತು 18 10 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ. 10 ನೇ ಪ್ರತಿವಾದಿ ದಾವಾ ಐಟಮ ನಂ.13 ರಲ್ಲಿ ತನ್ನ ಕುಟುಂಬದ ಸಮೇತ ವಾಸ ಮಾಡಿಕೊಂಡಿರುತ್ತಾನೆ ಎಂದರೆ ಸರಿ. 10 ನೇ ಪ್ರತಿವಾದಿ ದಾವಾ ಐಟಮ ನಂ.18 ರಲ್ಲಿ ತನ್ನ ಸ್ವಂತ ಉದ್ಯೋಗ ನಡೆಸುತ್ತಿದ್ದಾನೆ ಎಂದರೆ ಸರಿ. 10 ನೇ ಪ್ರತಿವಾದಿ ದಾವಾ ಐಟಮ ನಂ.13 ಮತ್ತು 18 ರ ಮೇಲೆ ಸಾಲ ಪಡೆದಿದ್ದಾನೆ ಎಂದರೆ ಸರಿ.

ನನ್ನ ಜನ್ಮ ದಿನಾಂಕಃ 10-10-1974. ನಾನು ದ್ವಿತಿಯ ಪಿ ಯು ಸಿ ವರೆಗೆ ಓದಿರುತ್ತೇನೆ. ನನ್ನ ಕಾಕ ಮತ್ತು ನನ್ನ ತಂದೆ ಯಾವುದೇ ನೌಕರಿ ಮಾಡಿಲ್ಲ ಎಂದರೆ ಸರಿ. ಈಗೀನ ಪ್ರಶಾಂತ ಲಾಡ್ಜ (ದಾವಾ ಐಟಮ ನಂ.5 ರಿಂದ 7) ಇರುವ ಜಾಗೆ ನಮ್ಮ ಕುಟುಂಬದ ಮೂಲ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯನ್ನು ಹೋರತು ಪಡಿಸಿ ನಮ್ಮ ಕಟುುಂಬಕ್ಕೆ ಬೇರೆ ಮೂಲ ಆಸ್ತಿಗಳು ಇಲ್ಲ. ನಮ್ಮ ಕುಟುಂಬದವರು ಗೋಕಾಕಕ್ಕೆ ಬಂದಾಗ ದಾವಾ ಐಟಮ ನಂ.5 ರಿಂದ 7 ನ್ನು ಹೊರತು ಪಡಿಸಿ ಬೇರೆ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿ. ದಾವಾ ಐಟಮ ನಂ.5 ರಿಂದ 7 ರ ಆದಾಯದಿಂದ ಇನ್ನಿತರ ದಾವಾ ಆಸ್ತಿಗಳನ್ನು ಖರೀದಿಸಲಾಗಿದೆ ಎಂದರೆ ಸಾಕ್ಷಿ ಅಲ್ಲಿ ಕೇವಲ ಮನೆ ಇದ್ದು ಗಳಿಕೆ ಮಾಡುವಂತಹ ಯಾವುದೇ ಆಸ್ತಿ ಇರಲಿಲ್ಲವೆಂದು ನುಡಿದಿರುತ್ತಾರೆ. 10 ನೇ ಪ್ರತಿವಾದಿ ವೆಂಕಟೇಶ್ವರ ಸಂಪ್ಲಾಯರ್ಸ್ ಎಂಬ ಹೆಸರಿನ ಅಡಿಯಲ್ಲಿ ಪಶು ಆಹಾರ ವ್ಯವಹಾರ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ನನಗ 1981 ರಲ್ಲಿ 4 ರಿಂದ 5 ವರ್ಷ ಆಗಿತ್ತು ಎಂದರೆ ಸಾಕ್ಷಿ 6 ವರ್ಷ ಎಂದು ನುಡಿದಿರುತ್ತಾರೆ. 11 ನೇ ಪ್ರತಿವಾದಿ 1981 ರಲ್ಲಿ ಪ್ರಶಾಂತ ಲಾಡ್ಜ ಕಟ್ಟಿದು ಅದನ್ನು ನೋಡಿಕೊಂಡು ಹೋಗುತ್ತಿದ್ದ ಎಂಬ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿ.

ಪ್ರಶಾಂತ ಲಾಡ್ಜ ಕಟ್ಟಿದ ನಂತರ ಮೊದಲನೆ ಪ್ರತಿವಾದಿ 11 ನೇ ಪ್ರತಿವಾದಿಗೆ ಬಕ್ಸಿಸು ಪತ್ರ ಬರೆದುಕೊಟ್ಟಿರುತ್ತಾರೆ. ನನ್ನ ಅಜ್ಜ ಮತ್ತು ನನ್ನ ಅಣ್ಣ ತಮ್ಮಂದಿರ ಮನೆಯ ಉತ್ಪನ್ನದಿಂದ ಪ್ರಶಾಂತ ಲಾಡ್ಜ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ಮನೆಯ ಉತ್ಪನ್ನ ಯಾವುದೇ ಇರಲಿಲ್ಲವೆಂದು ನುಡಿದಿರುತ್ತಾರೆ. ಪ್ರಶಾಂತ ಲಾಡ್ಜ ನ್ನು ಎಷ್ಟು ಹಣ ಒದಗಿಸಿ ಕಟ್ಟಿಸಿದ್ದಾರೆ ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಹಣವನ್ನು ಯಾವ ಮೂಲದಿಂದ ತಂದು ಪ್ರಶಾಂತ ಲಾಡ್ಜ ಕಟ್ಟಲಾಯಿತು ಎಂಬುದನ್ನು ನನಗೆ ಹೇಳಲಾಗುವುದಿಲ್ಲ. ಕಾರಣ ನಾನು ಆಗ ಚಿಕ್ಕವನು ಇದ್ದೆ. ಮೊದಲನೆ ಪ್ರತಿವಾದಿ 11 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದಾನೆಂದು ಹೇಳಲಾದ ಬಕ್ಸಿಸು ಪತ್ರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ. ನನಗೆ ಸದರಿ ಬಕ್ಸಿಸು ಪತ್ರ ಮತ್ತು ಪ್ರಶಾಂತ ಲಾಡ್ಜ ಕಟ್ಟಿದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

ದಿಃ 01-04-1992 ರಲ್ಲಿ ಪ್ರಶಾಂತ ಲಾಡ್ಜನ್ನು ನಮ್ಮ ಒಟ್ಟು ಕುಟುಂಬದ ಸದಸ್ಯರು ಪಾಲುದಾರಿಕಾ ನಾತೆಯಿಂದ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಶಾಂತ ಲಾಡ್ಜನ್ನು ಪ್ರತಿವಾದಿ ನಂ.1, 11, ಪ್ರತಿವಾದಿ ನಂ.10 ರವರ ಹೆಂಡತಿ, ಪ್ರತಿವಾದಿ ನಂ.2 ರವರ ಹೆಂಡತಿ ಮತ್ತು 4 ನೇ ಪ್ರತಿವಾದಿ ಪಾಲುದಾರಿಕಾ ಅಡಿಯಲ್ಲಿ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಮ ನಂ.5 ರಿಂದ 7 ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ನನಗೆ ಮಾಹಿತಿ ಇಲ್ಲ.

ಪ್ರತಿವಾದಿ ನಂ.2(ಸಿ) ಗೆ ಈಗ 50 ವರ್ಷ. ಆತ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯಬಲ್ಲ. ಮೃತ 2 ನೇ ಪ್ರತಿವಾದಿ ಈ ದಾವೆ ಚಾಲ್ತಿಯಲ್ಲಿರುವ ದಾವಾ ಐಟಮ ನಂ.1 ನ್ನು ಮಾರಾಟ ಮಾಡಿದ್ದಾನೆ ಎಂದರೆ ಸರಿ. ಸದರಿ ಆಸ್ತಿಯನ್ನು ಪಾಲನ್ನು ಕೊಡುವುದನ್ನು ತಪ್ಪಿಸುವ ಉದ್ದೇಶದಿಂದ ಖೊಟ್ಟಿಯಾಗಿ ಮಾರಾಟ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಚಾಲ್ತಿಯಲ್ಲಿರುವಾಗ ದಿಲ್ಲಿ ಪ್ಲಾಜಾ ವ್ಯವಹಾರ ಪ್ರಾರಂಬಿಸಲಾಯಿತು ಎಂದರೆ ಸರಿ. ನಾವು ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿ ಸದರಿ ಆಸ್ತಿಯ ಮೇಲೆ ಸಾಲ ತೆಗೆದಿದ್ದೇವೆ ಎಂದರೆ ಸರಿ. ಸದರಿ ಸಾಲ ತೀರಿಸುವುದು ನಮ್ಮ ವೈಯಕ್ತಿಕ ಜವಾಬ್ದಾರಿ ಎಂದರೆ ಸರಿ. ದಿಲ್ಲಿ ಪ್ಲಾಜಾ ವ್ಯವಹಾರದಲ್ಲಿ ಸುಮಾರು 5 ವರೆ ಕೋಟಿ ಮಾಲ ಇರುತ್ತದೆ. ಸದರಿ ವ್ಯವಹಾರ ಪ್ರಾರಂಬಿಸಲು ಜಂಟಿ ಕುಟುಂಬದ ಆದಾಯವನ್ನು ಹಾಕಲಾಗಿದೆ ಎಂದರೆ ಸರಿಯಲ್ಲ.

ದಾವಾ ಐಟಮ ನಂ.13 ಮತ್ತು 18 ನ್ನು ಹೊರತು ಪಡಿಸಿ ಇನ್ನುಳಿದ ದಾವಾ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಪಾಲು ಆಗುವ ಆಸ್ತಿಗಳು ಯಾವುದು ಇಲ್ಲ. ನಾನು 18 ವರ್ಷದವನಾಗಿದ್ದರಿಂದ ಆದಾಯ ತೆರಿಗೆ ಪಾವತಿಸುತ್ತಿದ್ದೇನೆ. 1992 ರಲ್ಲಿ ನಾನು ಎಷ್ಟು ಆದಾಯವನ್ನು ಘೋಷಿಸಿದ್ದೆ ಎಂಬುದು ನನಗೆ ಗೊತ್ತಿಲ್ಲ. ನಾನು ನನ್ನ ಅಕೌಂಟೆಂಟ ನ ಸಾಕ್ಷ್ಯ ಮಾಡಿಸಬಲ್ಲೆ. ನಾನು 10 ನೇ ತರಗತಿಯವನು ಇದ್ದಾಗಿನಿಂದಲೂ ದಿಲ್ಲಿ ರೆಡಿಮೆಡ ಸ್ಟೋರ್ಸನಲ್ಲಿ ಕೆಲಸ ಮಾಡುತ್ತಿದ್ದೆ. ನಾನು 18 ನೇ ವರ್ಷದವನು ಇದ್ದಾಗ ಮಾಲ ಕೊಡುತ್ತಿದ್ದ ಪಾರ್ಟಿಯಿಂದ ಸಾಲ ತೆಗೆದುಕೊಂಡು ನನ್ನ ಸ್ವಂತ ವ್ಯವಹಾರ ಪ್ರಾರಂಬಿಸಿದ್ದೆ. ತದ ನಂತರ ನಾನು ಬ್ಯಾಂಕಿನಿಂದ ಸಾಲ ಪಡೆದುಕೊಂಡಿದ್ದೇನೆ. ನಾನು ಬ್ಯಾಂಕಿನಿಂದ 3 ವರೆ ಕೋಟಿ ರೂ.ಗಳನ್ನು ಸಾಲವಾಗಿ ಪಡೆದುಕೊಂಡಿದ್ದೆ.

ನಾನು ಶ್ರೀ ಬಾಲಾಜಿ ಕ್ರಿಯೇಷನ ಮುಂಬೈ, ಅಶ್ವಿನಿ ಎಂಟರಪ್ರೈಸಿಸ್ ಅಹಮ್ಮದಾಬಾದ, ಮಿತ್ತಲಿ ಹುಜರಿ ದಿಲ್ಲಿ, ಇವರುಗಳಿಂದ ಸಾಲವನ್ನು ಪಡೆದುಕೊಂಡಿದ್ದೆ. ಸದರಿ ಸಾಲವನ್ನು ಯಾವುದೇ ಆದಾರದ ಮೇಲೆ ನನಗೆ ನೀಡಿಲ್ಲ. ನಾನು ಒಟ್ಟು ಕುಟುಂಬದ ಆದಾಯದಿಂದ ವ್ಯವಹಾರ ಪ್ರರಂಭಿಸಿದ್ದೆ ಎಂದರೆ ಸರಿಯಲ್ಲ. ಕಡಿಮೆ ಬೆಲೆಗೆ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದನ್ನು ಹೊರತು ಪಡಿಸಿ ಬೇರೆ ಯಾವುದಕ್ಕೆ ಕೌಶ್ಯಲ್ಯ ಬೇಕಾಗಿಲ್ಲ ಎಂದರೆ ಸಾಕ್ಷಿ ಕಡಿಮೆ ಬೆಲೆಗೆ ತರಲು ಅಂತಹ ಕೌಶ್ಯಲ್ಯ ಬೇಕು ಎಂದು ನುಡಿದಿರುತ್ತಾರೆ. ನನ್ನ ತಂದೆ ನನ್ನ ದೊಡ್ಡಪ್ಪ ಹಾಗೂ ನನ್ನ ಕಾಕ ನೀಡಿದ ಹಣದಿಂದ ನಾನು ವ್ಯವಹಾರ ಪ್ರಾರಂಬಿಸಿದ್ದೆ ಎಂದರೆ ಸರಿಯಲ್ಲ. ನಾನು, ಮೊದಲನೆ ಪ್ರತಿವಾದಿ, ಪ್ರತಿವಾದಿ ನಂ.2 ಸಿ, 3 ನೇ ಪ್ರತಿವಾದಿ ಮತ್ತು 11 ನೇ ಪ್ರತಿವಾದಿಗಳೊಂದಿಗೆ ಶಾಮಿಲಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 11 ನೇ ಪ್ರತಿವಾದಿ 1981 ರಲ್ಲಿ ಪ್ರಶಾಂತ ಲಾಡ್ಜನ್ನು ಕಟ್ಟಿಸಿದ್ದು ಆತನೇ ಅದನ್ನು ನೋಡಿಕೊಳುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆ ಸಮಯದಲ್ಲಿ 4 ರಿಂದ 6 ವರ್ಷ ಇದ್ದು ಅದರ ಬಗ್ಗೆ ವೈಯಕ್ತಿಕ ಮಾಹಿತಿ ಇರಲಿಲ್ಲ ಎಂದರೆ ಸರಿ.

ಪ್ರತಿವಾದಿನಂ.11 ರಿಂದ 17 ರವರ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ